(ಶ್ರೀ ಎಸ್. ನಿಜಲಿಂಗಪ್ಪ)

ಆಗಿದೆ, ಕೆಲಸ ಪ್ರಾರಂಭವಾಗುತ್ತದೆ. ಜಯಚಾಮರಾಜಪುರದ ಜಿಲ್ಲಾ ಬೋರ್ಡ್ ಆಸ್ಪತ್ರೆ ಇನ್ನೂ ಆಗಿಲ್ಲ.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ಸಿದ್ದಯ್ಯನವರು ಈ ಕಟ್ಟಡಗಳು ಪೂರ್ತಿಯಾಗಲೆಂದು ಸ್ವರ್ಗದ ಬಾಗಿಲಿನಲ್ಲಿ ಕಾದು ನಿಂತಿದ್ದಾರೆ, ಅವನ್ನು ಪೂರ್ತಿಮಾಡುತ್ತೀರಾ ?

ಅಧ್ಯಕ್ಷರು.—ಅಂಥ ಪ್ರಶ್ನೆಗಳನ್ನು ಕೇಳಬಾರದು.

ಶ್ರೀ ಪುಟ್ಟೇಗೌಡ.—ಜಯಚಾಮರಾಜಪುರ ಎಂದು ಹೇಳಿದರು. ಅದು ಹಾಸನ ಡಿಸ್ಟ್ರಿಕ್ಟಿನಲ್ಲಿ ಎಲ್ಲಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಅರಸೀಕೆರೆ ತಾಲ್ಲೂಕಿನಲ್ಲಿರಬೇಕು.

Supply of Electric Power to the Villages on Pala-Badami Road in Dharwar District.

Q.—1759. Smt. LEELAVATI MAGADI (Shirahatti).—

Will the Government be pleased to state :—

(*a*) whether it is a fact that administrative sanction had been accorded by the Bombay Government for the supply of electricity to villages along Pala-Badami road in Dharwar District;

(*b*) the reasons for not taking up the work;

(*c*) when do they propose to take up the work ;

(*d*) the steps they propose to take to electrify this area ?

A.—Sri H. K. VEERANNA GOWDH (Minister for Public Works).—

(*a*) Yes.

(*b*) The work was found to be unremunerative.

(*c*) It is proposed to take up the work after the Scheme becomes remunerative.

(*d*) It is proposed to conduct fresh surveys and prepare detailed estimates.

ಶ್ರೀಮತಿ ಲೀಲಾವತಿ ಮಾಗಡಿ.—(*a*) ಪ್ರಶ್ನೆಗೆ ಉತ್ತರವಾಗಿ ಧಾರವಾಡ ಡಿಸ್ಟ್ರಿಕ್ಟ್ ಪಾಲ-ಬಾದಾಮಿ ರಸ್ತೆಯಲ್ಲಿರುವ ಗ್ರಾಮಗಳಿಗೆ ವಿದ್ಯುಚ್ಛಕ್ತಿ, ಸರಬರಾಯಿ ಮಾಡಲು ಬೊಂಬಾಯಿ ಸರ್ಕಾರ ಆಡಳಿತ ಮಂಜೂರಾತಿ ಕೊಟ್ಟಿತ್ತೆಂದು ಹೇಳಿದ್ದೀರಿ. ಯಾವಾಗ ಕೊಟ್ಟಿತ್ತು ?

*ಶ್ರೀ ಎಚ್. ಕೆ. ವೀರಣ್ಣಗೌಡ.—1954ನೆಯ ಇಸವಿ ಜುಲೈ 22 ರಲ್ಲಿ.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಕಾಮಗಾರಿ ರಾಭದಾಯಕವಾಗಿಲ್ಲವೆಂದು ಯಾವ ಇಸವಿಯಲ್ಲಿ ಗೊತ್ತಾಯಿತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬೊಂಬಾಯಿ ಸರ್ಕಾರದಲ್ಲಿದ್ದಾಗಲೇ ಕೆಲವು ತಿಂಗಳಾದಮೇಲೆ ಗೊತ್ತಾಗಿರಬೇಕು. 54 ಸಾವಿರ ರೂಪಾಯಿ ನಷ್ಟವಾಗುತ್ತದೆ, ಆದ್ದರಿಂದ ಹೆಚ್ಚು ಪವರ್ ತೆಗೆದುಕೊಳ್ಳಲು ಸಾಕಷ್ಟು ಜನ ಮುಂದೆ ಬಂದಮೇಲೆ ನೋಡೋಣ, ಅಲ್ಲಿಯವರೆಗೆ ಇದನ್ನು ಬಿಡಬಹುದು ಎಂದು ಬೊಂಬಾಯಿ ಸರ್ಕಾರಕ್ಕೆ ಮುಂಬಯಿ ಎಲೆಕ್ಟ್ರಿಸಿಟಿ ಬೋರ್ಡಿನವರು ಬರೆದಿದ್ದಾರೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷ್ಷ್ ತೆಗೆದುಕೊಂಡರೆ ಸಾಲದೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ನೇ ಬೇರೆ, ಟೆಕ್ನಿಕಲ್ ಸ್ಯಾಂಕ್ಷನ್ನೇ ಬೇರೆ. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷ್ಷ್ ಸಾಮಾನ್ಯವಾಗಿ ಆಗಬಹುದು. ಆದರೆ ಟೆಕ್ನಿಕಲ್ ಸ್ಯಾಂಕ್ಷ್ಷ್ ಕೊಡಬೇಕಾದರೆ ಲಾಭ ನಷ್ಟ ವಗೈರೆ ಎಲ್ಲಾ ನೋಡಿ ಕೊಡಬೇಕಾಗುತ್ತದೆ. ಬೋರ್ಡ್ ಡೀಟೈಲ್ಡ್ ಸರ್ವೆಮಾಡಿ ಇದರಿಂದ ನಷ್ಟವಾಗುತ್ತದೆ, ಇನ್ನೂ ಹೆಚ್ಚು ಪವರ್ ತೆಗೆದುಕೊಳ್ಳುವವರು ಬಂದಾಗ ನೋಡಬಹುದು ಎಂದು ಶಿಫಾರ್ಸು ಮಾಡಿದೆ, ಸರ್ಕಾರ ಅದನ್ನೊಪ್ಪಿ ಈ ಕೆಲಸವನ್ನು ಕೈಬಿಟ್ಟಿದೆ.

Sri K. P. GADAG.—May I know whether it is the policy of Government to supply power only to those places which are remunerative ?

Sri H. K. VEERANNA GOWDH.—That is especially so after the formation of the Electricity Board under the 1948 Central Act which says that the Board should work on a no-loss basis. Therefore if any project is unremunerative, generally it will not be taken up by the Board.

Sri G. B. SHANKAR RAO.—How can a project which is unremunerative become remunerative afterwards ?

Sri H. K. VEERANNA GOWDH.—It is a very simple thing. Suppose only five people come forward to take electricity. Then it is unremunerative, but instead, if 125 come forward then more power will be consumed and there will be more income and it will then become remunerative.

ಶ್ರೀ ಎಫ್. ಎಚ್. ಮೊಹಸೀನ್.—ಬೊಂಬಾಯಿ ಸರ್ಕಾರದವರು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷ್ಷ್ ಕೊಡುವಾಗ ಸರ್ವೆಮಾಡಿ ಡೀಟೈಲ್ಡ್ ಎಸ್ಟಿಮೇಟ್ ಮಾಡಿದ್ದರೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ; ಡಿಟೈಲ್ಡ್ ಸರ್ವೆ, ಎಸ್ಟಿಮೇಟ್ ಮಾಡುವವರು ಬೋರ್ಡಿನವರು. ಆದ್ದರಿಂದ ಬೊಂಬಾಯಿ ಸರ್ಕಾರ ಆ ಕೆಲಸ ಮಾಡಿರಲಿಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.—ಆ ಕ್ಷೇತ್ರದಲ್ಲಿ ಮೂರು ಮುನಿಸಿಪಲ್ ಪಟ್ಟಣಗಳು ಬರುತ್ತವೆ, ಅಲ್ಲಿ ಲಿಫ್ಟ್ ಇರಿಗೇಷನ್ನಿಗೆ ಅನುಕೂಲವಾದ ಸ್ಥಳಗಳಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡಿದ್ದಾರೆಂದು ಕಾಣುತ್ತದೆ, ಒಟ್ಟು ಪಟ್ಟಣ ಮತ್ತು ಹಳ್ಳಿ ಸೇರಿ 24 ಆಗುತ್ತವೆ, ಆದ್ದರಿಂದ ಕೊಡಬಹುದು ಎಂದು 77 ಲಕ್ಷ 22 ಸಾವಿರ ರೂಪಾಯಿಗಳಿಗೆ ಅಂದಾಜು ಮಾಡಿದ್ದರು. ಆದರೆ ಪರಿಶೀಲನೆಯಾಗಿ 54 ಸಾವಿರ ರೂಪಾಯಿ ನಷ್ಟ ವಾಗುತ್ತದೆ ಎಂದು ಕಂಡುಬಂದುದರಿಂದ ಹೆಚ್ಚು ಜನ ಬಂದಾಗ ಕೊಡೋಣ ಎಂದು ನುಮ್ಮನಾಗಿದ್ದಾರೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಈಗಲಾದರೂ ಇದರ ಬಗ್ಗೆ ಸರ್ವೆ ಮಾಡಿ ಲಾಭದಾಯಕವಾಗುತ್ತದೆಯೇ ಎಂಬುದನ್ನು ಪರಿಶೀಲನೆಯಾಗುವುದೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಡೀಟೈಲ್ಡ್ ಸರ್ವೆ ಮಾಡಬೇಕೆಂದಿದೆ ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ರೋಡ್ ಸರ್ವೆ ಫಾರಂ ಕೊಟ್ಟಿದೆ. ಅವರು ಅದನ್ನು ಭರ್ತಿ ಮಾಡಿ ಡೆಪ್ಯುಟಿ ಕಮೀಷನರಿಗೆ ಕಳುಹಿಸಬೇಕು. ಅಲ್ಲಿಂದ ಶಿಪಾರ್ಸಾಗಿ ಬೋರ್ಡಿಗೆ ಹೋದರೆ ಎಲೆಕ್ಟ್ರಿಸಿಟಿ ಬೋರ್ಡಿನವರು ಪುನಃ ಪರಿಶೀಲಿಸುತ್ತಾರೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಅದು ಅಭಿವೃದ್ಧಿಯಾಗಿಲ್ಲದ ಪ್ರದೇಶವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನಷ್ಟಮಾಡಿಕೊಂಡು ಬೋರ್ಡ್ ಪವರ್ ಕೊಡುವುದಿಲ್ಲ.

Sri F. X. DENIS PINTO.—Is the Government aware that a scheme becomes remunerative only after supply of power is begun in large quantities?

ಶ್ರೀ ಎಚ್. ಕೆ. ವೀರಣ್ಣಗೌಡ.—ಮದುವೆಯಾದ ಹೊರತು ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಟ್ಟ ಹೊರತು ಮದುವೆಯಾಗುವುದಿಲ್ಲ ಎಂಬ ಹಾಗಲ್ಲ ಇದು, ಇದು ಲಾಭದಾಯಕವಾಗಲು ಮುಂದೆ 10 ವರ್ಷಗಳಾಗ ಬಹುದು. ಅಲ್ಲಿಯವರೆಗೂ ನಷ್ಟ ಹೊಂದಲು ಇಂಡಿಯಾ ಸರ್ಕಾರದ ಆಕ್ಟ್ ಪ್ರಕಾರ ಬೋರ್ಡಿಗೆ ಅಧಿಕಾರವಿಲ್ಲ.

Sri F. X. DENIS PINTO.—Is Government aware that now many schemes are unremunerative because the Board is not able to give new connections for want of materials?

Mr. SPEAKER.—That is a different question.

ಶ್ರೀಮತಿ ಲೀಲಾವತಿ ಮಾಗಡಿ.—ಹೊಸದಾಗಿ ಸರ್ವೆ ಪರಿಶೀಲನೆ ಮಾಡುವುದು ಮುಗಿಯುವುದಕ್ಕೆ ಎಷ್ಟು ದಿವಸವಾಗುತ್ತದೆ?

ಶ್ರೀ ಎಚ್. ಕೆ ವೀರಣ್ಣಗೌಡ.—ಅದಕ್ಕೆ ವರದಿ ತರಿಸ ಬೇಕು. ಎಷ್ಟು ಕಾಲದಲ್ಲಿ ಮುಗಿಯುತ್ತದೆಂದು ಈಗ ಹೇಳುವುದಕ್ಕಾಗುವುದಿಲ್ಲ.

Sri J. H. SHAMSUDDIN.—Is Government aware that on account of the changed circumstances the scheme is now remunerative?

Sri H. K. VEERANNA GOWDH.—At best I can give only a guess answer. It is, therefore, that a detailed survey has been found necessary. After the report is made it will be known whether it is remunerative or not.

Sri A. BHEEMAPPA NAIK.—What is the return that you expect to make the scheme remunerative?

Sri H. K. VEERANNA GOWDH.—5 per cent in the malnad area and 7½ per cent in the maidan area. Since this is maidan area, the return expected is 7½ per cent.

Sri A. BHEEMAPPA NAIK.—What is the difference between the present return and the return necessary if it is to become remunerative?

Sri H. K. VEERANNA GOWDH.—I have already said that to make it remunerative the return should be 7½ per cent.

Nationalisation of Cinema theatres in the State.

Q.—1938. Dr. A. R. KARISIDDAPPA (Arsikere).—

Will the Government be pleased to state :—

(*a*) the number of cinema theatres in the State and in Bangalore City ;

(*b*) whether they propose to nationalise these cinema theatres?

A.—Sri VEERENDRA PATIL (Deputy Minister for Home Affairs and Industries).—

	Mysore State	*Bangalore City*
(*a*)	216	39
(*b*)	No.	

*Sri VEERENDRA PATIL.—Sir, with your permission, I would like to correct the answer. In the reply to (*a*), the number of cinema theatres in Mysore State should be 220 as on 30th September 1957 and not 216 as printed, and the number of cinema theatres in Bangalore City should be 35 and not 39 as printed.

Sri A. R. KARISIDDAPPA.—Why is it that Government is not inclined to nationalise the cinema theatres in Mysore State?

Sri VEERENDRA PATIL.—I would like to bring to the notice of the Hon'ble Member that exhibition of films is not an industry. It is only an occupation